ಓ:ಎಸ್:ನಂ.*176-16*

ಪಿ.ಡಬ್ಲ್ಯು-*1*

***ದಿ: 09-04-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಪಾಟೀ ಸವಾಲು: ವಾದಿ ಪರ ಶ್ರೀ ಕೆ.ಆರ್.ಜಿ. ವಕೀಲರಿಂದ***

ನನ್ನ ಅಜ್ಜನ ಹೆಸರು ತಿಮ್ಮಣ್ಣ ಆಗಿರುತ್ತದೇ. ಅವರ ತಂದೆಯ ಹೆಸರು ಗಿರಿಯಣ್ಣ. ಗಿರಿಯಣ್ಣ ನಿಗೆ ತಿಮ್ಮಣ್ಣ, ಮೂಡಲಗಿರಿಯಣ್ಣ ಹಾಗೂ ಹನುಮಂತಪ್ಪ ಎಂದು *3* ಜನ ಮಕ್ಕಳು ಎಂದರೆ ಸರಿ, ತಿಮ್ಮಣ್ಣನಿಗೆ ಚಿಕ್ಕತಿಮ್ಮಣ್ಣ ಮತ್ತು ರಾಮಣ್ಣ ಎಂದು ಇಬ್ಬರು ಮಕ್ಕಳು ಎಂದರೆ ಸರಿ, ನಾನು ಚಿಕ್ಕತಿಮ್ಮಣ್ಣನ ಮಗ ಎಂದರೆ ಸರಿ, ರಾಮಣ್ಣನ ಮಗ ರಾಜಶೇಖರಪ್ಪ ಮತ್ತು ದೇವರಾಜ ಎಂದರೆ ಸರಿ,ಮೂಡಲಗಿರಿಯಪ್ಪನಿಗೆ ಶಿವಮೂರ್ತಿ , ತಮ್ಮಯ್ಯ ಮತ್ತು ಅಂಜನಪ್ಪ ಎಂದು *3* ಜನ ಮಕ್ಕಳು ಎಂದರೆ ಸರಿ, ಹನುಮಂತಪ್ಪನ ಮಗ ಪ್ರತಿವಾದಿ ಎಂದರೆ ಸರಿ, ತಿಮ್ಮಣ್ಣನಿಗೆ *45* ಇಂಟು *60* ಅಡಿ ವಿಸ್ತೀರ್ಣದ ನಿವೇಶನ ಅವರ ಹಿಸ್ಸೆಗೆ ಬಂದಿತ್ತು ಎಂದರೆ ಸುಳ್ಳು. ಸದರಿ ನಿವೇಶನದ ಚಕ್ಕುಬಂದಿ ಪೂರ್ವಕ್ಕೆ ಸಿದ್ದಣ್ಣ , ಕರಿಯಣ್ಣರ ಹಿತ್ತಲು, ಪಶ್ಚಿಮಕ್ಕೆ ದೇವಣ್ಣ, ಕರಿಯಣ್ಣರ ಹಿತ್ತಲು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಮೂಡಲಗಿರಿಯಣ್ಣನ ಹಿಸ್ಸೆ ಎಂದರೆ ಸುಳ್ಳು. ನಮ್ಮೂರಿನ ಲಕ್ಷ್ಮಿ ದೇವಾಲಯವನ್ನು ಮೂಡಲಗಿರಿಯಣ್ಣನ ನಿವೇಶನದಲ್ಲಿ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಯ ತಂದೆಯ ಹಿಸ್ಸೆಗೆ ಬಂದ ಸ್ವತ್ತು ಎಂದರೆ ಸರಿಯಲ್ಲ. ರಂಗಪ್ಪನ ಆರ್ಸಿಸಿ ಮನೆಯ ಪಶ್ಚಿಮಕ್ಕೆ ದಾವಾ ಸ್ವತ್ತು ಇರುತ್ತದೆ ಎಂದರೆ ಸರಿ, ದಾವ ಸ್ವತ್ತಿನ ಪಶ್ಚಿಮಕ್ಕೆ ಬಸಣ್ಣ ಖರೀದಿಸಿದ ಸ್ವತ್ತು ಎಂದರೆ ಸರಿ, ಸಾಕ್ಷಿ ಮುಂದುವರೆದು ಅದು ಕೃಷ್ಣಪ್ಪನ ಸ್ವತ್ತು ಎಂದು ನುಡಿಯುತ್ತಾರೆ. ಪ್ರಸ್ತುತ ದಾವಾ ಸ್ವತ್ತಿನ ಪಶ್ಚಿಮಕ್ಕೆ ಮಲ್ಲಪ್ಪ , ರಂಗಪ್ಪ ಇದ್ದಾರೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿ, ನಿಪಿ*3* ರಲ್ಲಿ ಕಾಣುವ ಕಾಲಿ ನಿವೇಶನ ರಂಗಪ್ಪನವರ ಸ್ವತ್ತು ಎಂದರೆ ಸರಿಯಲ್ಲ. ನಿಪಿ*3* ರಲ್ಲಿ ಕಾಣುವ ಗುಡಿಸಿಲನಿಲ್ಲಿ ಪ್ರತಿವಾದಿಯು ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ವಾಸವಾಗಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾಗಿ ಅದರಲ್ಲಿ ಗೋಡೆ ಮತ್ತು ಕಿಟಕಿ ಕಾಣುವ ಮನೆಯು ರಂಗಪ್ಪನವರಿಗೆ ಸೇರಿದ್ದು ಎಂದರೆ ಸರಿ ಎಂದು ಒಪ್ಪಿದ್ದರಿಂದ ಸದರಿ ಪೋಟೋವನ್ನು ನಿಡಿ.*1* ಎಂದು ಗುರುತಿಸಲಾಯಿತು. ನಿಪಿ*3* ರಲ್ಲಿ ಕಾಣುವ ಕಾಲಿ ಜಾಗ ನಿಡಿ*1* ರಲ್ಲಿ ಇಲ್ಲ ಎಂದರೆ ಸುಳ್ಳು. ನಿಡಿ*1* ರಲ್ಲಿ ಗುಡಿಸಿಲಿನ ಪಕ್ಕದಲ್ಲಿ ಆರ್ಸಿಸಿ ಮನೆ ಕಾಣುತ್ತದೆಎಂದರೆ ಸರಿ, ನಿಪಿ*3* ರಲ್ಲಿ ರಂಗಪ್ಪನ ಜಾಗದಲ್ಲಿ ನಿಂತುಕೊಂಡು ಪೋಟೋ ತೆಗೆಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ*1* ರಲ್ಲಿ ಪ್ರತಿವಾದಿಯು ಗುಡಿಸಿಲಿನ ಮುಂದೆ ನಿಂತಿದ್ದಾರೆ ಎಂದರೆ ಸರಿ, ನಿಪಿ*3* ರಲ್ಲಿ ಕಾಣುವ ಗುಡಿಸಲು ನನ್ನದಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ಅವರ ತಂದೆ ದಾವಾ ಸ್ವತ್ತಿನ ಮಾಲಿಕರಾಗಿದ್ದು ಅವರೇ ಕಂದಾಯವನ್ನು ಇಂದಿನವರೆಗೂ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಎಂದೂ ಸಹ

ದಾವ ಸ್ವತ್ತಿನ ಸ್ವಾದೀನಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾವಾ ಸ್ವತ್ತು ನನ್ನ ಅಜ್ಜ ತಿಮ್ಮಣ್ಣನ ಹೆಸರಿನಲ್ಲಿ ಇರುತ್ತದೆ. ಸದರಿ ಸ್ವತ್ತಿನ ಅಸೆಸ್ಮೆಂಟ್ ಸಂಖ್ಯೆ:*342* ಆಗಿರುತ್ತದೆ. ನಿಪಿ*2* ರಲ್ಲಿ ದಾವ ಸ್ವತ್ತಿನ ಸಂಖ್ಯೆ ಮತ್ತು ನನ್ನ ಅಜ್ಜನ ಹೆಸರು ಇದ್ದು ಅದು *1960-70* ನೇ ಸಾಲಿನದ್ದಾಗಿರುತ್ತದೆ ಸಾಕ್ಷಿ ಮುಂದುವರೆದು ಅಂದಿನಿಂದಲೂ ನಾವೇ ಸ್ವಾದೀನ ಹೊಂದಿರುತ್ತೇವೆ ಎಂದು ನುಡಿಯುತ್ತಾರೆ. ದಾವ ಸಲ್ಲಿಸುವ ಸುಮಯದಲ್ಲಿ ದಾವ ಸ್ವತ್ತಿನ ಖಾತೆ ನನ್ನ ಅಜ್ಜನ ಹೆಸರಿನಲ್ಲಿ ಇತ್ತು. ನಾವು ದಾವಾ ಸ್ವತ್ತಿನ ಕಂದಾಯವನ್ನು ಹನುಮಂತಪ್ಪ ಬಿನ್ ಬಿರಿಯಪ್ಪನವರ ಹೆಸರಿನಲ್ಲಿ ಕಟ್ಟಿರುತ್ತೇವೆ. ಹನುಮಂತಪ್ಪನು ಪ್ರತಿವಾದಿಯ ತಂದೆ ಎಂದರೆ ಸರಿ, ಸದರಿ ಕಂದಾಯವನ್ನು ಖಾತೆ ಸಂಖ್ಯೆ: *385* ಕ್ಕೆ ಪಾವತಿಸಲಾಗಿದೆ ಎಂದರೆ ಸರಿ, ಖಾತಾ ಸಂಖ್ಯೆ: *385* ಪ್ರತಿವಾದಿಯ ತಂದೆ ಹನುಮಂತಪ್ಪನವರ ಹೆಸರಿಗೆ ಸಂಬಂದಿಸಿದ್ದು ಎಂದರೆ ಸುಳ್ಳು. ಖಾತೆ ಸಂಖ್ಯೆ:*385* ಸ್ವತ್ತು ನಮ್ಮದಲ್ಲ. ಸದರಿ ಸ್ವತ್ತಿನ ಪೂರ್ವಕ್ಕೆ ರಂಗಪ್ಪ, ಪಶ್ಚಿಮಕ್ಕೆ ಬಸಪ್ಪ , ಉತ್ತರಕ್ಕೆ ಸೋಮಶೇಖರಯ್ಯನ ಸ್ವತ್ತು, ದಕ್ಷಿಣಕ್ಕೆ ರಸ್ತೆ ಇರುತದೆ ಎಂದರೆ ಸುಳ್ಳು. ದಾವಾ ಸ್ವತ್ತಿನ *2016* ನೇ ಸಾಲಿನ ದಾಖಲೆಯನ್ನು ಹಾಜರುಪಡಿಸಿರುವುಲ್ಲ. ಪ್ರತಿವಾದಿಯ ಆಸ್ತಿಗೆ ಕಂದಾಯ ಕಟ್ಟಿ ಅವರ ಸ್ವತ್ತು ನನ್ನ ಸ್ವತ್ತು ಎಂದು ಸುಳ್ಳು ಚಕ್ಕುಬಂದಿ ನೀಡಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆ ಈಗಲೂ ಸಹ ನನ್ನ ಅಜ್ಜನ ಹೆಸರಿನಲ್ಲಿ ಇರುತ್ತದೆ. ನಾನು ಖಾತೆ ಬದಲಾವಣೆ ಮಾಡಲು ಯಾವುದೇ ಅರ್ಜಿ ಸಲ್ಲಿಸಿಲ್ಲ. ದಾವ ಸ್ವತ್ತು ಪ್ರತಿವಾದಿಯ ಸ್ವತ್ತು ಆಗಿರುವುದರಿಂದ ನಾವು ಇದುವರೆಗೂ ಖಾತ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತಿನ ಖಾತೆಯ ಸಂಖ್ಯೇಯುಳ್ಳ ಸ್ವತ್ತು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತಿನ ಸ್ವಾದಿನದಸಲ್ಲಿ ನಾವು ಇರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕ: *21-4-2016* ರಂದು ಹಾಗೂ *20-2-2016* ರಂದು ಪ್ರತಿವಾದಿ ಬಂದು ನನ್ನ ಸ್ವಾದೀನಕ್ಕೆ ತಕರಾರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ವಿರುದ್ಧ ಪೋಲೀಸರಿಗೆ ದೂರು ನೀಡಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ಪ್ರತಿವಾದಿ ಸ್ವತ್ತನ್ನು ಕಬಳಿಸಲು ನಾನು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**